

## ‘ಅಂದುಕೊಂಡಿರಲೇ ಇಲ್ಲ’

ಜಪಾನ್ ದೇಶದ ಪ್ರಮುಖ ಪಟ್ಟಣವೊಂದರ ಬಳಿ ಒಂದು ವಿಶೇಷವಾದ ಮಹತ್ವವುಳ್ಳ ಬಾವಿ ಇದೆಯಂತೆ. ಅದರ ಬಳಿಗೆ ಹೋಗಿ ಮನದ ಇಚ್ಛೆಯನ್ನು ಹೇಳಿಕೊಂಡು ಒಂದು ನಾಣ್ಯವನ್ನು ಎಸೆದರೆ ಇಚ್ಛೆ ಈಡೇರುತ್ತದಂತೆ. ಈ ವಿಷಯವನ್ನು ಅರಿತ ಗುಂಡ ತನ್ನ ಹೆಂಡತಿಯನ್ನು ಕರೆದುಕೊಂಡು ಆ ಬಾವಿಯನ್ನು ನೋಡಲು ಜಪಾನ್‌ಗೆ ಹೋದ. ಮೊದಲು ಅದರ ಸಮೀಪ ಹೋದ ಗುಂಡ ಕಣ್ಣುಮುಚ್ಚಿ ನಮಸ್ಕರಿಸಿ ತನ್ನಿಚ್ಛೆಯನ್ನು ಮನದಲ್ಲೇ ಹೇಳಿಕೊಂಡು ಒಂದು ನಾಣ್ಯವನ್ನು ಆ ಬಾವಿಯೊಳಗೆ ಹಾಕಿದ. ನಂತರ ಅವನ ಹೆಂಡತಿ ನಾಣ್ಯವನ್ನು ಅದರಲ್ಲಿ ಹಾಕಲು ಹೋದಾಗ ಆಯತಪ್ಪಿ ಕಾಲುಜಾರಿ ಆ ಬಾವಿಯೊಳಗೆ ಬಿದ್ದುಬಿಟ್ಟಳು.

ಗುಂಡ ಕೂಡಲೇ ಅಚ್ಚರಿಯಿಂದ ಹೀಗೆ ಉದ್ಗರಿಸಿದ, ‘ನನ್ನ ಇಚ್ಛೆ ಇಷ್ಟು ಬೇಗ ಈಡೇರುತ್ತದೆಂದು ನಾನು ಅಂದುಕೊಂಡಿರಲೇ ಇಲ್ಲ!’

**ಎಂ.ಕೆ. ಮಂಜುನಾಥ್, ಬೆಂಗಳೂರು**

## ಉಪಯೋಗ ಇಲ್ಲದ್ದು

ಹಬ್ಬಕ್ಕೆ ಒಂದು ವಾರ ಮಾತ್ರ ಬಾಕಿ ಇತ್ತು. ನಿಂಗಮ್ಮ ಮನೆಯನ್ನು ಶುಚಿಗೊಳಿಸುವ ಕಾರ್ಯದಲ್ಲಿ ನಿರತಳಾಗಿದ್ದಳು. ಎಲ್ಲೆಂದರಲ್ಲಿ ಬಿದ್ದಿದ್ದ ಬಟ್ಟೆ, ಪುಸ್ತಕಗಳನ್ನು ಒಂದೆಡೆ ಜೋಡಿಸಿದಳು. ಮನೆಯ ಹಾಲ್ ರೂಮು, ಬಚ್ಚಲು ಮನೆ ಹಾಗೂ ದೇವರ ಕೋಣೆಯಲ್ಲಿ ದೂಳು ಹೊಡೆದಳು. ಹಳೇ ದಿನಪತ್ರಿಕೆಗಳನ್ನು ಒಂದರ ಮೇಲೊಂದರಂತೆ ಸೇರಿಸಿ ಕಟ್ಟಿಟ್ಟಳು. ಹೊರಗಡೆಯಿಂದ ‘ಹಳೆ ಪಾತ್ರೆ, ಹಳೆ ಕಬ್ಬಿಣ, ಹಳೆ ಪೇಪರ್’ ಎಂಬ ಕೂಗು ಕೇಳಿಸಿತು. ಮೂಗಿಗೆ ಕರ್ಚೀಫ್ ಕಟ್ಟಿಕೊಂಡು ಹೊರಗೆ ಬಂದು ನಿಂತಳು. ನಿಂಗಮ್ಮನನ್ನು ನೋಡಿ ಗುಜರಿಯವನು ‘ಮೇಡಂ ಉಪಯೋಗವಿಲ್ಲದ್ದು ಇದ್ದರೆ ಕೊಡಿ ತಗೋತೀನಿ’ ಅಂದ. ಕೂಡಲೆ ಏನೋ ಜ್ಞಾಪಿಸಿಕೊಂಡವಳಂತೆ ‘ಯಜಮಾನರು ಇಲ್ಲಪ್ಪ, ನಾಳೆ ಬಾ’ ಅಂದಳು ನಿಂಗಮ್ಮ!



**ವಿ. ಹೇಮಂತಕುಮಾರ್, ಬೆಂಗಳೂರು**